# ಹಬ್ಬಗಳು

**ಯುಗಾದಿ** - ಯುಗಾದಿ ಹಬ್ಬವು ಭಾರತದ ಹಲವು ಭಾಗದಲ್ಲಿ ಹೊಸ ವರ್ಷದ ಸಂಕೇತವಾಗಿದೆ. ಇದು ಚೈತ್ರಮಾಸದ ಮೊದಲ ದಿನ. "ಯುಗಾದಿ" ಅಂದರೆ ಯುಗ + ಆದಿ , ಹೊಸ ಯುಗದ ಆರಂಭ ಎಂದು. ಯುಗಾದಿಯಂದು ಬೆಳಿಗ್ಗೆ ಬೇಗ ಎದ್ದು , ಸ್ನಾನ ಮಾಡಿ, ಸೂರ್ಯನಿಗೆ ಹಾಗೂ ದೇವರಿಗೆ ಪೂಜೆ ಮಾಡುತ್ತಾರೆ. ಮನೆಯ ಮಂದೆ ರಂಗೋಲಿ ಹಾಕುತ್ತಾರೆ. ಈ ಹಬ್ಬದ ದಿನ " ಬೇವು ಬೆಲ್ಲ ", ಮಾವಿನಕಾಯಿಯ ಪಚಡಿ ಮತ್ತು ಬೇಳೆ ಹೋಳಿಗೆ ಮಾಡುತ್ತಾರೆ. ಬೇವುಬೆಲ್ಲ , ಬದುಕಿನ ಕಷ್ಟ ಸುಖದ ಸಂಕೇತವಾಗಿದೆ.

**ಸ್ವಾತಂತ್ರ ದಿನಾಚರಣೆ** - ಭಾರತವು ಬ್ರಿಟಿಷರ ಆಳ್ವಿಕೆಯಿಂದ ಮುಕ್ತವಾದ ದಿನ ಆಗಸ್ಟ ೧೫, ೧೯೪೭. ನಮಗೆ ಸ್ವಾತಂತ್ರವು ನಮ್ಮ ದೇಶದ ಜನತೆ ಹಾಗೂ ಮಹಾತ್ಮ ಗಾಂಧಿ, ಭಗತ್ ಸಿಂಗ್, ಚಂದ್ರಶೇಖರ್ ಆಜ಼ಾದ್, ಸುಭಾಸ್ ಚಂದ್ರ ಭೋಸ್ ರಂತಹ ಮಹಾನ್ ನಾಯಕರಿಂದ ದೊರೆತಿದೆ. ಎಲ್ಲರ ತ್ಯಾಗ ಬಲಿದಾನವನ್ನು ನೆನಪಿಸಿಕೊಳ್ಳಲು ಪ್ರತಿವರ್ಷ ಸ್ವಾತಂತ್ರ ದಿನಾಚರಣೆಯನ್ನು ವಿಜ್ರುಂಭಣೆಯಿಂದ ಆಚರಿಸುತ್ತೇವೆ. ನಮಗೆ ಸ್ವಾತಂತ್ರ ದೊರಕಿ ೭೫ ವರ್ಷಗಳು ತುಂಬಿದೆ. ಈ ವರ್ಷ "ಆಜ಼ಾದಿ ಕಾ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ.

**ದೀಪಾವಳಿ** – ದೀಪಾವಳಿಯು ದೀಪಗಳ ಹಬ್ಬ. ಈ ಹಬ್ಬವನ್ನು ನಮ್ಮ ದೇಶದಾದ್ಯಂತ ಆಚರಿಸುತ್ತಾರೆ. ರಾಕ್ಷಸ ನರಕಾಸುರನ ಅಂತ್ಯವಾದದಕ್ಕೆ ದೀಪಗಳನ್ನು ಬೆಳಗಿ ಸಂಭ್ರಮ ಸಡಗರದಿಂದ ಆಚರಿಸುತ್ತಾರೆ. ಲಕ್ಷ್ಮಿ ಪೂಜೆ ಹಾಗೂ ಗೋಪೂಜೆಯನ್ನು ಸಂತೋಷದಿಂದ ಮಾಡುತ್ತಾರೆ. ಇದು ಪಟಾಕಿಯ ಹಬ್ಬವು ಹೌದು. ಮನೆಯಲ್ಲಿ ಎಲ್ಲರೂ ಒಟ್ಟಾಗಿ ಸಿಹಿತಿಂಡಿಯನ್ನು ಮಾಡಿ , ದೇವರಿಗೆ ನೈವೇದ್ಯ ಕೊಟ್ಟು, ಊಟ ಮಾಡುತ್ತಾರೆ.

**ಗಣರಾಜ್ಯೋತ್ಸವ** - ಭಾರತವು ಪ್ರತಿ ವರ್ಷ ಜನವರಿ 26 ಅನ್ನು ಗಣರಾಜ್ಯೋತ್ಸವವನ್ನಾಗಿ ಆಚರಿಸುತ್ತದೆ. ಜನವರಿ ೨೬ ಭಾರತದಲ್ಲಿ ಗಣರಾಜ್ಯ ಮತ್ತು ಸಂವಿಧಾನ ಜಾರಿಗೆ ಬಂದ

ದಿನವಿದು. ಮೊದಲ ಗಣರಾಜ್ಯೋತ್ಸವವನ್ನು 1950 ರಲ್ಲಿ ಸಮರ್ಪಿಸಲಾಯಿತು. ಈ ದಿನದಂದು, ದೇಶದಾದ್ಯಂತ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ ಮತ್ತು ವಿಶೇಷವಾಗಿ ಶಾಲೆಗಳು ಮತ್ತು ಸರ್ಕಾರಿ ಕಚೇರಿಗಳಲ್ಲಿ ಇದನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತದೆ

**ಹೋಳಿ** - ಬಣ್ಣಗಳ ಹಬ್ಬ ಹೋಳಿ. ಹೋಳಿಕಾ ಎಂಬ ರಾಕ್ಷಸಿಯ ದೊಡ್ಡ ಮೂರ್ತಿ ಮಾಡಿ ಅದಕ್ಕೆ ಬೆಂಕಿ ಹಚ್ಚಿ ಖುಶಿಯಿಂದ ಹಬ್ಬವನ್ನು ಆಚರಿಸುತ್ತಾರೆ. ಎಲ್ಲರ ಮನೆಯಲ್ಲಿ ಸಿಹಿತಿಂಡಿಗಳನ್ನು ಮಾಡಿ , ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಎಲ್ಲರೂ ಒಟ್ಟಿಗೆ ಸೇರಿ ಒಬ್ಬರಿಗೊಬ್ಬರು ಬಣ್ಣ ಹಚ್ಚಿ ಸಂತೋಷವನ್ನು ಹಂಚಿಕೊಳ್ಳುತ್ತಾರೆ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ